# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ, ಕಾರವಾರ

## ಮೂ. ದಾ. ನಂ. 37/2024

ಪಿ.ಡಬ್ಲ್ಯು 2

| | | |
|---|---|---|
| ಸಾಕ್ಷಿದಾರರ ಹೆಸರು | – | ಕೃಷ್ಣಾನಂದ ಭೂತೇ |
| ತಂದೆಯ ಹೆಸರು | – | ತುಕಾರಾಮ ಭೂತೇ |
| ವಯಸ್ಸು | – | 59 ವರ್ಷ |
| ಉದ್ಯೋಗ | – | ವಕೀಲ ವೃತ್ತಿ |
| ವಾಸ್ತವ್ಯ | – | ಪದ್ಮನಾಭನಗರ, ಕಾರವಾರ ತಾಲೂಕ |

(ಇಂದು ದಿನಾಂಕ 11-02-2026 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಖ್ಯ ವಿಚಾರಣೆ – ವಾದಿ ಪರ ಶ್ರೀ ಪಿ.ಜಿ.ಪಿ. ವಕೀಲರಿಂದ**

ಸುಮಾರು 16 ವರ್ಷಗಳಿಂದ ನಾನು ವಕೀಲ ವೃತ್ತಿಯೊಂದಿಗೆ ನೋಟರಿ ಕರ್ತವ್ಯವನ್ನು ನಿರ್ವಹಿಸುತ್ತಿದ್ದೇನೆ. ನನಗೆ ಸಾಕ್ಷಿ ಹೇಳಲು ನ್ಯಾಯಾಲಯದಿಂದ ಸಮನ್ಸ್ ಬಂದಿದೆ. ದಿನಾಂಕ 11-10-2014 ರಂದು ವಾದಿ ಮತ್ತು ಪ್ರತಿವಾದಿಯರು ಕ್ರಯದ ಕರಾರು ಪತ್ರ ತಯಾರಿಸಲು ನನ್ನ ಬಳಿ ಬಂದಿದ್ದರು. ಅವರು ಕೊಟ್ಟಂತಹ ಮಾಹಿತಿಯ ಅಧಾರದ ಮೇಲೆ ನಾನು ಕ್ರಯದ ಕರಾರುಪತ್ರವನ್ನು ತಯಾರಿಸಿದ್ದೇನೆ. ಪ್ರತಿವಾದಿ ಇವರು ಸ.ನಂ. 51 ರ ಮಾಲಿಕರಿದ್ದು 2 ಎಕರೆ ಜಮೀನನ್ನು ವಾದಿಗೆ ಮಾರಾಟ ಮಾಡಲು ಒಪ್ಪಿ ರೂ. 32,00,000-00 ಗಳಿಗೆ ಮಾತುಕತೆ ಮಾಡಿದ್ದರು. ರೂ. 10,00,000-00 ಹಣವನ್ನು ಮುಂಗಡವಾಗಿ ಚೆಕ್ಕ ಮೂಲಕ ಪ್ರತಿವಾದಿಗೆ ವಾದಿ ಕೊಟ್ಟಿದ್ದರು. ಇನ್ನುಳಿದ ಹಣವನ್ನು 11 ಇ ನಕ್ಷೆ ಮತ್ತು ಪೋಡಿಯಾದ ನಂತರ ಕೊಟ್ಟು ಕ್ರಯಪತ್ರ ಬರೆದುಕೊಡುತ್ತೇನೆ ಎಂದು ಪ್ರತಿವಾದಿ ಹೇಳಿದ್ದರು. ಆ ಪ್ರಕಾರ ನಾನು ಕ್ರಯದ ಕರಾರುಪತ್ರವನ್ನು ತಯಾರಿಸಿದ್ದು, ಇಬ್ಬರು ಸಾಕ್ಷಿಗಳು ನನ್ನ ಸಮಕ್ಷಮದಲ್ಲಿ ಎಂದು ಸಹಿ ಹಾಕಿದ್ದಾರೆ. ಸದರಿ ದಾಖಲಾತಿಗೆ ನಾನು ಸಹಿ ಹಾಕಿದ್ದೇನೆ. ಸದರಿ ದಾಖಲಾತಿಯನ್ನು ನೋಟರಿ ಮಾಡಿದ್ದೇನೆ. ಸದರಿ ದಾಖಲಾತಿಗೆ ವಾದಿ ಮತ್ತು ಪ್ರತಿವಾದಿಯರು ಸಹಿ ಹಾಕಿದ್ದಾರೆ. ವಾದಿ ಮತ್ತು ಪ್ರತಿವಾದಿಯ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಕ್ರಯದ ಕರಾರುಪತ್ರವನ್ನು ಈಗಾಗಲೇ ನಿ.ಪಿ. 5 ಎಂದು ಗುರುತಿಸಲಾಗಿದ್ದು, ವಾದಿಯ ಸಹಿಯನ್ನು ನಿ.ಪಿ.5(ಎ) ಎಂದು, ಪ್ರತಿವಾದಿಯ ಸಹಿಯನ್ನು ನಿ.ಪಿ.5(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು

ಅದನ್ನು ನಿ.ಪಿ.5(ಸಿ) ಎಂದು ಗುರುತಿಸಲಾಯಿತು. ಸದರಿ ದಾಖಲಾತಿಯನ್ನು ನೋಟರಿ ಮಾಡಿದ್ದನ್ನು ನಾನು ನಿರ್ವಹಿಸಿದ ರಜಿಸ್ಟರನಲ್ಲಿ ನಮೂದಿಸಿದ್ದೇನೆ. ಸಾಕ್ಷಿ ಈ ದಿನ ಮೂಲ ನೋಟರಿ ರಜಿಸ್ಟರನೊಂದಿಗೆ ಸದರಿ ದಾಖಲಾತಿಯ ಅಟೆಸ್ಟೆಡ್ ಪ್ರತಿಯನ್ನು ತಂದಿದ್ದು, ಮೂಲ ದಾಖಲಾತಿಯೊಂದಿಗೆ ಅಟೆಸ್ಟೆಡ್ ಪ್ರತಿಯನ್ನು ತಾಳೆ ಮಾಡಿ, ಅಟೆಸ್ಟೆಡ್ ಪ್ರತಿಯನ್ನು ನಿ.ಪಿ. 11 ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು – ಪ್ರತಿವಾದಿ ಪರ ಶ್ರೀ ಎಸ್.ವಾಯ್.ಎಸ್. ವಕೀಲರಿಂದ</u>**

ನಿ.ಪಿ.5 ರ ಮೇಲೆ ಡ್ರಾಫ್ಟೆಡ್ (ತಯಾರಿಸಿದವರು) ಎಂದು ಸಹಿ ಹಾಕಿಲ್ಲ ಎಂದರೆ ಸರಿ. ನಿ.ಪಿ.5 ನ್ನು ನಾನು ತಯಾರಿಸಿಲ್ಲ ಅನ್ನುವುದು ಸರಿಯಲ್ಲ. ನಿ.ಪಿ.5 ನ್ನು ವಾದಿ ಎಲ್ಲಿಯೋ ತಯಾರಿಸಿ ನನ್ನ ಕಚೇರಿಗೆ ತೆಗೆದುಕೊಂಡು ಬಂದಿದ್ದರು ಎಂದರೆ ಸರಿಯಲ್ಲ. ಅಂತಹ ದಾಖಲಾತಿಯ ಮೇಲೆ ನಾನು ನನ್ನ ಸಮಕ್ಷಮದಲ್ಲಿ ಎಂದು ಸಹಿ ಹಾಕಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿ ವಾದಿಯ ಕಡೆಯಿಂದ ರೂ. 10,00,000–00 ಸಾಲ ಪಡೆದು ಭದ್ರತೆಗಾಗಿ ನಿ.ಪಿ.5 ನ್ನು ಬರೆದುಕೊಟ್ಟಿದ್ದರು ಎಂದರೆ ಸರಿಯಲ್ಲ. ನಿ.ಪಿ.5 ರಲ್ಲಿ ಭದ್ರತೆಗಾಗಿ ಬರೆದುಕೊಟ್ಟಂತಹ ದಾಖಲಾತಿ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ವಾದಿ ಮತ್ತು ಪ್ರತಿವಾದಿಯರು ನನಗೆ ಪರಿಚಯಸ್ಥರಲ್ಲ. ವಾದಿ ಮತ್ತು ಪ್ರತಿವಾದಿಯರು ನಿ.ಪಿ.5 ನ್ನು ಬರೆಯುವ ದಿನಾಂಕದಂದು ನನ್ನ ಕಚೇರಿಗೆ ಬಂದಿದ್ದರು. ಆ ದಿನ ನಾನು 4–5 ಕರಾರುಪತ್ರಗಳನ್ನು ತಯಾರಿಸಿರಬಹುದು. ನಿ.ಪಿ.5 ನ್ನು ನಾನು ತಯಾರಿಸದಿದ್ದರೂ ಸಹ ವಾದಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಹಿರಿಯ ಸಿವಿಲ್ ಜಡ್ಜ, ಕಾರವಾರ